ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು.

ವಿಷಯ :- ಸುರತ್ಕಲ್ ಕ್ಷೇತ್ರದಲ್ಲಿನ ಪಿಲಿಕುಳ ಕೆರೆಯಲ್ಲಿ ಆಕ್ರಮವಾಗಿ ಮನೆಗಳ ನಿರ್ಮಾಣ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 390 (2965)

ಶ್ರೀ ಕುಂಬ್ಳೆ ಸುಂದರರಾವ್ (ಸುರತ್ಕಲ್) :- ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಸುರತ್ಕಲ್ ಕ್ಷೇತ್ರದಲ್ಲಿನ ಪಿಲಿಕುಳ ಕೆರೆಯಲ್ಲಿ ಜನ ಅಕ್ರಮವಾಗಿ ಮನೆ ಕಟ್ಟಿಕೊಳ್ಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಅಕ್ರಮವಾಸಿಗಳಿಂದ ಕೆರೆಯನ್ನು ಮುಕ್ತಗೊಳಿಸಲು ಸರಕಾರ ಹಾಕಿಕೊಂಡಿರುವ ಕಾರ್ಯಕ್ರಮವೇನು?

ಶ್ರೀ ಆರ್. ಎಲ್. ಜಾಲಪ್ಪ (ಕಂದಾಯ ಸಚಿವರು) :-

ಅ) ಬಂದಿದೆ.

ಆ) ಸದರಿ ಆಕ್ರಮಣ ಮಿಲಾಸೆ ಪಡಿಸುವ ಬಗ್ಗೆ ಕ್ರಮ ಕೈಗೊಳ್ಳಲಾಗುತ್ತಿದೆ.

ವಿಷಯ :- ಆರಾಧನಾ ಯೋಜನೆ ಕುರಿತು.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 392 (3012)

ಶ್ರೀ ಹೆಚ್. ಡಿ. ಬಸವರಾಜು (ವಿರಾಜಪೇಟೆ) :- ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

(ಅ) ಸರ್ಕಾರ ಆರಾಧನಾ ಯೋಜನೆ ನಿಲ್ಲಿಸುವ ಬಗ್ಗೆ ಯೋಚಿಸುತ್ತಿದೆಯೇ?

(ಆ) ಹಾಗಿಲ್ಲದಿದ್ದಲ್ಲಿ ಈ ಯೋಜನೆಗೆ ಈ ಸಾಲಿನಲ್ಲಿ ಎಷ್ಟು ಹಣ ಮೀಸಲಿಡಲಾಗಿದೆ ಮತ್ತು ಎಷ್ಟು ಪ್ರಸ್ತಾವಗಳು ಸರ್ಕಾರದ ಮುಂದಿರುತ್ತವೆ?

(ಇ) ಸರ್ಕಾರ ಆರಾಧನಾ ಯೋಜನೆ ನಿಲ್ಲಿಸಿದ್ದಲ್ಲಿ ಅದಕ್ಕೆ ಪರ್ಯಾಯವಾಗಿ ಯಾವ ಯೋಜನೆ ಪ್ರಾರಂಭಿಸುವ ಬಗ್ಗೆ ಸರ್ಕಾರ ಯೋಚಿಸಿದೆ, ಮತ್ತು ಈಗಾಗಲೇ ಸರ್ಕಾರದ ಮುಂದಿರುವ ಪ್ರಸ್ತಾವನೆಗಳನ್ನು ಪರ್ಯಾಯ ಯೋಜನೆಯಡಿ ತೆಗೆದುಕೊಳ್ಳಲು ಸರ್ಕಾರ ಹಾಕಿಕೊಂಡಿರುವ ಕಾರ್ಯಕ್ರಮಗಳೇನು?

ಶ್ರೀ ಆರ್. ಎಲ್. ಜಾಲಪ್ಪ (ಕಂದಾಯ ಸಚಿವರು) :-

(ಅ) ಇಲ್ಲ

(ಆ) 1995-96 ನೇ ಸಾಲಿನಲ್ಲಿ ರೂ. 5-00 ಕೋಟಿಯನ್ನು ಒದಗಿಸಲಾಗಿದೆ. ಪ್ರಸ್ತಾವನೆಗಳು ಸರ್ಕಾರಕ್ಕೆ ಬರುವುದಿಲ್ಲ, ಪ್ರತಿ ಜಿಲ್ಲೆಯ ಜಿಲ್ಲಾಧಿಕಾರಿಗಳ ಬಳಿ ಇರುತ್ತವೆ.

(ಇ) ಉದ್ಭವಿಸುವುದಿಲ್ಲ.